ಓ.ಎಸ್.ನಂಃ 52/2020

**ಡಿಡಬ್ಲ್ಯೂ-1**

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 16.10.2025 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು: ವಾದಿ ಪರ ವಕೀಲರಿಂದಃ</u>**

ನಾನು ದ್ವಿತಿಯ ಪಿಯುಸಿವರೆಗೂ ಓದಿದ್ದೇನೆ. ನನ್ನ ಪ್ರಮಾಣ ಪತ್ರದ ವಿಷಯಗಳನ್ನು ಅಲ್ಪ ಪ್ರಮಾಣದಲ್ಲಿ ಓದಬಲ್ಲೆ. ದಾವ ಸ್ವತ್ತಿನ ಒಟ್ಟು ವಿಸ್ತೀರ್ಣ 4 ಎಕರೆ 6 ಗುಂಟೆ. ದಾವ ಸ್ವತ್ತಿನ ದಕ್ಷಿಣ ದಿಕ್ಕಿಗೆ ನನ್ನ ಜಮೀನು ಬರುತ್ತದೆ. ನನ್ನ ದೊಡ್ಡಪ್ಪ ದಾವ ಸ್ವತ್ತಿನ ಉತ್ತರ ದಿಕ್ಕಿಗೆ ವ್ಯವಸಾಯ ಮಾಡುತ್ತಾರೆ. ನಾನು ಮತ್ತು ನನ್ನ ದೊಡ್ಡಪ್ಪ ಬೇರೆ ಬೇರೆ ವ್ಯವಸಾಯ ಮಾಡುತ್ತಿದ್ದೇವೆ. ನನ್ನ ಮತ್ತು ನನ್ನ ದೊಡ್ಡಪ್ಪನ ಸ್ವತ್ತುಗಳು ದಾವ ಸರ್ವೇ ನಂಬರ್ ನ ಪೂರ್ವ ದಿಕ್ಕಿಗೆ ಬರುತ್ತದೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ದೊಡ್ಡಪ್ಪನ ಜಮೀನಿನ ಪೂರ್ವ ಭಾಗಕ್ಕೆ ಮಹೇಶರವರ ಜಮೀನು ಇದೆ. ಮಿಣ್ಣಿ ಸಿದ್ದೇಗೌಡರ ಜಮೀನು ಸಹ ಪೂರ್ವ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದ ಖಂಡಿಕೆ 13 ರಲ್ಲಿ ಬರೆಸಿರುವ ವಿಷಯ ಸುಳ್ಳು. ದಿಃ 30.04.1964 ರ ಭೋಗ್ಯದ ಪತ್ರವನ್ನು ವಾದಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನಾನು ತಿಳಿದುಕೊಂಡಿಲ್ಲ. ಸದರಿ ಭೋಗ್ಯ ಪತ್ರವನ್ನು ನಾನು ಪರಿಶೀಲಿಸಿಲ್ಲ. ಸದರಿ ಭೋಗ್ಯ ಪತ್ರವನ್ನು ಪರಿಶೀಲಿಸಲು ನನಗೆ ತೊಂದರೆ ಇರಲಿಲ್ಲ.

ಸದರಿ ಭೋಗ್ಯ ಪತ್ರದಲ್ಲಿ ಹೊನ್ನಮ್ಮ ಮತ್ತು 2ನೇ ಪ್ರತಿವಾದಿ ಅಂಕಯ್ಯ ಎಂ.ಕೆ. ಶ್ರೀನಿವಾಸ್ ಐಯ್ಯಂಗರ್ ರವರಿಗೆ ನಿಪಿ5 ರಂತೆ ದಾವ ಸರ್ವೇ ನಂಬರ್ ನಲ್ಲಿ 1 ಎಕರೆ 30 ಗುಂಟೆ ಭೋಗ್ಯಕ್ಕೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಭೋಗ್ಯ ಪತ್ರದ ಪಶ್ಚಿಮಕ್ಕೆ ಗೋಪಾಲಯ್ಯರವರ ಜಮೀನು ಇದೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ವಾದಿಗಳು ನನಗೆ ದೂರದ ಸಂಬಂಧಿಕರು. 1ನೇ ವಾದಿ ತಂದೆ ಹೆಸರು ರಂಗಯ್ಯ ಎಂದರೆ ಸರಿ. 1ನೇ ವಾದಿಯ ಅಜ್ಜನ ಹೆಸರು ಗೋಪಾಲಯ್ಯ ಎಂದರೆ ಸರಿ. ನಿಪಿ5 ರಲ್ಲಿ ನಮೂದಿಸಿರುವ ಗೋಪಾಲಯ್ಯ ವಾದಿಯ ತಾತ ಎಂದರೆ ಸರಿ. ವಾದಿ ಹಾಜರುಪಡಿಸಿರುವ ಇತರೆ ದಾಖಲೆಗಳನ್ನು ನಾನು ನೋಡಿಲ್ಲ. ವಾದಿ ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ನಾನು

ನೋಡಿದ್ದೇನೆ ಎಂದರೆ ಸರಿಯಲ್ಲ. ಒಂದುವೇಳೆ ನೋಡಿದ್ದೇನೆ ಎಂದು ಒಪ್ಪಿಕೊಂಡರೆ ಸತ್ಯಾಂಶ ಹೊರಬರುತ್ತದೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವ ಸರ್ವೇ ನಂಬರ್ ಜಮೀನಿನ ಉತ್ತರಕ್ಕೆ ಓಣಿ ಇದೆ ಎಂದರೆ ಸರಿ. ಅದಕ್ಕೆ ಹೊಂದಿಕೊಂಡಂತೆ ನಾಗರಾಜುಶೆಟ್ಟಿ ರವರ ಜಮೀನು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಜಮೀನು ಸಹ ಇದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸರ್ವೇ ನಂಃ 119 ರಲ್ಲಿ ನಮ್ಮ ಜಮೀನು ಇದೆ ಎಂದು ನುಡಿಯುತ್ತಾರೆ. ದಾವ ಸರ್ವೇ ನಂ.137/3 ರ ದಕ್ಷಿಣಕ್ಕೆ ಮಲ್ಲಪ್ಪರವರ ಜಮೀನು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಜಮೀನು ಸಹ ಇದೆ ಎಂದು ನುಡಿಯುತ್ತಾರೆ. ಸಜ್ಜಯ್ಯರವರಿಂದ ಮಲ್ಲಪ್ಪರವರು ದಿಃ 15.12.1958 ರಲ್ಲಿ ದಾವ ಸರ್ವೇ ನಂಬರ್ ನಲ್ಲಿ 1 ಎಕರೆ 8 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಜ್ಜಯ್ಯರವರು ಬೋಪಯ್ಯರವರ ಅಳಿಯ ಎಂದರೆ ಸರಿಯಲ್ಲ. ಬೋಪಯ್ಯರವರ ಭಾಗವನ್ನು ಸದರಿ ಸಜ್ಜಯ್ಯ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸರ್ವೇ ನಂಃ 137 ರಲ್ಲಿ ಸಜ್ಜಯ್ಯ 1 ಎಕರೆ 8 ಗುಂಟೆಯನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸರ್ವೇ ನಂಃ 137/1 ರಲ್ಲಿ ಒಟ್ಟು 2 ಎಕರೆ 38 ಗುಂಟೆ ಉಳಿದಿತ್ತು ಎಂದರೆ ಸರಿ.

ನಂತರ ವಾದಿಯ ತಾತ ಮತ್ತು ಹೊನ್ನಮ್ಮ ಉಳಿದ ಸ್ವತ್ತನ್ನು ಪಂಚರ ಸಮಕ್ಷಮ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಭಾಗದಲ್ಲಿ ವಾದಿಯ ತಾತನಿಗೆ 1 ಎಕರೆ 8 ಗುಂಟೆ ಮತ್ತು ಹೊನ್ನಮ್ಮನಿಗೆ 1 ಎಕರೆ 30 ಗುಂಟೆ ಬಂದಿತ್ತು ಎಂದರೆ ಸರಿಯಲ್ಲ. ಅದರಂತೆ ಕಂದಾಯ ದಾಖಲೆಗಳು ನಮೂದು ಇವೆ ಎಂದರೆ ಸಾಕ್ಷಿ ಅವುಗಳನ್ನು ಸೃಷ್ಟಿಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಪ್ರತಿವಾದ ಪತ್ರವನ್ನು ವಕೀಲರು ಬರೆದಿರುತ್ತಾರೆ. ಓ.ಎಸ್. ನಂ.123/2008 ನಮ್ಮ ಪರ ತೀರ್ಪು ಆಗಿದೆ. ಸದರಿ ತೀರ್ಪು ಬಂದ ನಂತರ ವಾದಿಗಳ ಸ್ವಾಧೀನಕ್ಕೆ ನಾವು ತೊಂದರೆ ಕೊಟ್ಟೇವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಗಳೇ ನಮ್ಮ ಸ್ವಾಧೀನಕ್ಕೆ ತೊಂದರೆ ಕೊಟ್ಟರು ಎಂದು ನುಡಿಯುತ್ತಾರೆ. ವಾದಿಗಳು ನಮ್ಮ ಸ್ವಾಧೀನಕ್ಕೆ ತೊಂದರೆ ಕೊಟ್ಟ ಬಗ್ಗೆ ಠಾಣೆಗೆ ದೂರು ನೀಡಿದ್ದೇವೆ. ನಮಗೂ ದಾವ ಸ್ವತ್ತಿಗೂ ವಾದಿಗಳಿಗೂ ಸಂಬಂಧ ಇಲ್ಲ ಎಂದು ನಾವು ಹೇಳಿದ್ದೇವೆ ಎಂದರೆ ಸರಿ. ನನ್ನ ತಂದೆ ಮತ್ತು

ಅಂಕಯ್ಯ ಓ.ಎಸ್. ನಂ.123/2008 ನ್ನು ದಾಖಲಿಸಿದ್ದರು ಎಂದರೆ ಸರಿ. ಅಂಕಯ್ಯ ನಮ್ಮ ಜೊತೆ ಚೆನ್ನಾಗಿದ್ದಾರೆ. ಓ.ಎಸ್. ನಂ.123/2008 ರ ಚೆಕ್ಕುಬಂಧಿಯಲ್ಲಿ ದಾವ ಸ್ವತ್ತು ಬರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಸ್ವತ್ತುಗಳನ್ನು ಕಬಳಿಸುವ ಸಲುವಾಗಿ ಓ.ಎಸ್. ನಂ.123/2008 ರಲ್ಲಿ ತಪ್ಪು ಚೆಕ್ಕುಬಂಧಿ ನಮೂದಿಸಿ ಡಿಕ್ರಿ ಪಡೆದುಕೊಂಡಿದ್ದೇವು ಎಂದರೆ ಸರಿಯಲ್ಲ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ